ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನಾಡಕಾರ್ಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/81/2013-14. ದಿನಾಂಕ 17-10-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕರಿನಾಗಪ್ಪ ತಂದೆ ಲೇಟ್ ಕರಿಯಪ್ಪ ಉರುಫ್ ಪೂಜಾರಿ<br>2)ಬಡನಾಗಪ್ಪ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ<br>3)ತುಪ್ಪಲ ನಾಗಪ್ಪ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ<br>4)ಅಜ್ಜಪ್ಪ ಸಾಹುಕಾರ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ<br>ಕುದರೆಡವು ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕರಿನಾಗಪ್ಪ ತಂದೆ ಬಡಮುದ್ದಪ್ಪ<br>ಕುದರೆಡವು ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 7/2. 9/1. 11/2. 37/3. ವಿಸ್ತೀರ್ಣ 3-10. 2-55. 0-96. 1-30. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 7/2. 9/1. 11/2. 37/3. ವಿಸ್ತೀರ್ಣ 3-10. 2-55. 0-96. 1-30. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಕುದರೆಡವು ಗೊಲ್ಲರಹಟ್ಟಿ ಗ್ರಾಮದ ಕರಿನಾಗಪ್ಪ ತಂದೆ ಲೇಟ್ ಕರಿಯಪ್ಪ. ಉರುಫ್ ಪೂಜಾರಿ ಇವರು ದಿನಾಂಕ 28-12-2012 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕುದರೆಡವು ಇವರು ನಮೂನೆ-21 ನೋಟಿಸನ್ನು ದಿನಾಂಕ 19-01-2013. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕುದರೆಡವು ಗೊಲ್ಲರಹಟ್ಟಿ ಗ್ರಾಮದ ಕರಿನಾಗಪ್ಪ ತಂದೆ ಬಡಮುದ್ದಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 03/2012-13. ದಿನಾಂಕ 26-02-2013. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-10-2013 ರಿಂದ 17-10-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕುದರೆಡವು ಗ್ರಾಮದ ಸನಂ 7/2. 9/1. 11/2. 37/3. ವಿಸ್ತೀರ್ಣ 3-10. 2-55. 0-96. 1-30. ಎಕ್ರೆ ಜಮೀನುಗಳು ಕರಿನಾಗಪ್ಪ ತಂದೆ ಬಡಮುದ್ದಪ್ಪ, ಕರಿಯಪ್ಪ ತಂದೆ ಅಜ್ಜಪ್ಪ, ನಾಗಪ್ಪ ತಂದೆ ಕರಿಯಪ್ಪ. ಮುದ್ದಪ್ಪ ತಂದೆ ಕರಿಯಪ್ಪ, ಇವರುಗಳ

ಪು.ತಿ.ನೋ:-2.

ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇದ್ದು ಇವರು ತಮ್ಮ ಚಿಕ್ಕಪ್ಪನ ಮಕ್ಕಳಾದ ಕರಿನಾಗಪ್ಪ ತಂದೆ ಕರಿಯಪ್ಪ ಉರುಫ್ ಪೂಜಾರಿ. ಬಡನಾಗಪ್ಪ ತಂದೆ ಅಜ್ಜಪ್ಪ ಉರುಫ್ ಪೂಜಾರಿ ತುಪ್ಪಲು ನಾಗಪ್ಪ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ ಮತ್ತು ಅಜ್ಜಪ್ಪ ಸಾಹುಕಾರ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ ಇವರುಗಳ ಹೆಸರಲ್ಲಿ ದಿನಾಂಕ 28-12-2012 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಪ್ರತಿವಾದಿಯಾದ ಬಡಮುದ್ದಪ್ಪ, ಹಾಗೂ ಅಜ್ಜಪ್ಪ ಇವರು ಮೌಖಿಕವಾಗಿ ಪಾಲು ವಿಭಾಗವಾಗಿರುತ್ತಾರೆ. ಪ್ರತಿವಾದಿಯ ತಂದೆ ನಿಧನ ನಂತರ ಪ್ರತಿವಾದಿಯ ಹೆಸರಲ್ಲಿ ಖಾತಾ ಬದಲಾವಣೆಯಾಗಿದೆ. ಸದರಿ ಜಮೀನುಗಳಲ್ಲಿ ಪ್ರತಿವಾದಿಯು ಸ್ವಾದೀನ ಅನುಭವವನ್ನು ಹೊಂದಿರುತ್ತಾರೆ. ದಿನಾಂಕ 28-12-2012 ರ ಪಾಲು ವಿಭಾಗ ಪತ್ರವು ನೊಂದಣಿ ರಹಿತ ಪತ್ರವಾಗಿರುತ್ತದೆ.

ಸದರಿ ಜಮೀನುಗಳ ಪೈಕಿ ಸನಂ 11/2. ವಿಸ್ತೀರ್ಣ 0-96. ಸೆಂಟ್ಸು ಜಮೀನಿನ ವಿವಾದವು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ಇವರ ಸಂ/ಕಂ/ಪಹಣಿ:ಅಪೀಲು:16/2013-14. ದಿನಾಂಕ 09-05-2013 ರಲ್ಲಿ ಪ್ರಕರಣ ದಾಖಲಾಗಿ ವಿಚಾರಣೆಗೆ ಬಾಕಿ ಇರುತ್ತದೆ. ಹಾಗೂ ಸದರಿ ಜಮೀನಿನ ವಿವಾದವು ಕೂಡ್ಲಿಗಿಯ ಸಿವಿಲ್ ನ್ಯಾಯಾಲಯ ಕಿರಿಯ ವಿಭಾಗ ಓ.ಎಸ್.ನಂಬರ್:54/2013 ರಲ್ಲಿ ಪ್ರಕರಣ ದಾಖಲಾಗಿ ವಿಚಾರಣೆ ಹಂತದಲ್ಲಿರುತ್ತದೆ. ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಈ ಎಲ್ಲಾ ಕಾರಣಗಳಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸುತ್ತಾ ಪ್ರತಿವಾದಿಯ ಪರ ನ್ಯಾಯ ದೊರಕಿಸಿ ಕೊಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ವಾದಿಗಳು ಪರ ನ್ಯಾಯಾವಾದಿಗಳು ಸಲ್ಲಿಸಿದ ದಾಖಲೆ ಮತ್ತು ಮಂಡಿಸಿದ ವಾದ ಮತ್ತು ಪ್ರತಿವಾದಿಗಳ ಪರ ನ್ಯಾಯಾವಾದಿಗಳು ಸಲ್ಲಿಸಿದ ದಾಖಲೆ ಹಾಗೂ ವಾದಗಳನ್ನು ಆಧರಿಸಿ ಸದರಿ ಸನಂ ಪೈಕಿ. 11/2. ವಿಸ್ತೀರ್ಣ 0-96. ಸೆಂಟ್ಸು ಜಮೀನಿನ ವಿವಾದವು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ಇವರ ನ್ಯಾಯಾಲಯದಲ್ಲಿ ಹಾಗೂ ಉಳಿದ ಜಮೀನುಗಳ ವಿವಾದವು ಮತ್ತು ಕೂಡ್ಲಿಗಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿ ಇತ್ಯರ್ಥಕ್ಕಾಗಿ ಬಾಕಿ ಇರುವ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಮು.ತಿ.ನೋ-3.

ತಹಶೀಲ್ದಾರರು ನಾಡ ಕಾರ್ಯಾಲಯ * ಗುಡೇಕೋಟೆ *

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 7/2. 9/1. 11/2. 37/3. ವಿಸ್ತೀರ್ಣ 3-10. 2-55. 0-96. 1-30. ಎಕ್ರೆ ಜಮೀನುಗಳ ಪೈಕಿ. ಸನಂ 11/2. ವಿಸ್ತೀರ್ಣ 0-96 ಸೆಂಟ್ಸು ಜಮೀನಿನ ವಿವಾದವು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ಇವರ ನ್ಯಾಯಾಲಯದಲ್ಲಿ ಹಾಗೂ ಉಳಿದ ಜಮೀನುಗಳ ವಿವಾದವು ಕೂಡ್ಲಿಗಿಯ ಸಿವಿಲ್ ಕೋರ್ಟ ಕಿರಿಯ ವಿಭಾಗ ಓ.ಎಸ್.ನಂಬರ್: 54/2013 ರಲ್ಲಿ ಪ್ರಕರಣ ದಾಖಲಾಗಿ ಇತ್ಯರ್ಥಕ್ಕಾಗಿ ಬಾಕಿ ಇರುವ ಕಾರಣ ಯಥಾಸ್ಥಿತಿಯಂತೆ ಮುಂದುರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 17-10-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕರಿನಾಗಪ್ಪ ತಂದೆ ಕರಿಯಪ್ಪ ಉರುಫ್ ಪೂಜಾರಿ ಹಾಗೂ ಇತರರು ಕುದರೆಡವು ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎ.ಶರಣಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕರಿನಾಗಪ್ಪ ತಂದೆ ಬಡಮುದ್ದಪ್ಪ ಕುದರೆಡವು ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎ.ಶಿವರಾಜ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ. .